ಅಧ್ಯಕ್ಷರು.—ಶ್ರೀ ಸಿ.ಸಿ. ಕಲಿಕೋಟಿಯಂವರು ಗೈರು ಹಾಜರಾಗಿದ್ದಾರೆ.

(೧೦) ಬಡವರಿಗೆ ಪಂಪ್ ಸೆಟ್ ವಿತರಣೆ ಮಾಡುವಾಗ ಕಡ್ಡಾಯವಾಗಿ ಎನ್.ಎನ್.ಗೆ, ಹಣ ವಸೂಲಿ ಮಾಡುವುದು.

ಶ್ರೀ ವಿನಯಕುಮಾರ್ ಸೊರಕೆ.—ಸನ್ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡಿರುವ ಹಾಗೆ ಇರುವ ಊರಿನಲ್ಲಿ ಬಡವರ ನೀರಾವರಿಗಾಗಿ ಒದಗಿಸುವ ಪಂಪ್ ಸೆಟ್‌ಗೆ ಉಪಯೋಗಿಸುವ ಸೀಮೆಎಣ್ಣೆಯನ್ನು, ರೇಷನ್ ಕಾರ್ಡ್‌ಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ರಾಷ್ಟ್ರೀಯ ಉಳಿತಾಯ ಯೋಜನೆ ಅನ್ವಯ ಹಣವನ್ನು ವಸೂಲಿ ಮಾಡಲಾಗುತ್ತಿದೆ. ಇದನ್ನು ಕಟ್ಟಲು ಸಾಧ್ಯವಾಗದಂತಹ ದುರ್ಬಲ ವರ್ಗದವರು, ಬಡವರು, ಅಶಕ್ತರಾದಂತಹವರು ಕಡ್ಡಾಯವಾಗಿ ಕಟ್ಟಬೇಕೆಂದು ಕ್ರಮವನ್ನು ಕೈಗೊಂಡಿರುವುದು ತುಂಬಾ ವಿಷಾದನೀಯವಾಗಿದೆ. ರಾಷ್ಟ್ರೀಯ ಉಳಿತಾಯ ಯೋಜನೆ ಅನ್ವಯ ಇದನ್ನು ಕಡ್ಡಾಯವಾಗಿ ಅಳವಡಿಸುವ ಬದಲು ಇದನ್ನು ಪ್ರಚಾರ ಕೊಟ್ಟು ಜನರ ಮನವೊಲಿಸುವುದು ಸೂಕ್ತ. ಈ ನಿಯಮವು ಬೇರೆ ಯಾವ ತಾಲ್ಲೂಕಿಗೂ ಅನ್ವಯಿಸದೆ ಬರೀ ಪುತ್ತೂರು ತಾಲ್ಲೂಕಿಗೆ ಅನ್ವಯಿಸದೆ, ಈ ಒಂದು ತೊಂದರೆಯನ್ನು ಕೂಡಲೇ ಪರಿಹಾರ ಮಾಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಪಡಿಸುತ್ತೇನೆ.

ಶ್ರೀ ವೀರಣ್ಣ.—ಬಲವಂತವಾಗಿ, ಕಡ್ಡಾಯವಾಗಿ ಯಾರ ಹಿಕ್ಕಿರವೂ ಉಳಿತಾಯ ಮಾಡುವುದಕ್ಕೂ ಇಷ್ಟಪಡುವುದಿಲ್ಲ. ಅವರ ಮನವೊಲಿಸಿ ಈ ಯೋಜನೆಯಲ್ಲಿರತಕ್ಕ ಉಪಯೋಗಗಳನ್ನು ಜಿಲ್ಲೆಯಲ್ಲಿ ಮಾಡಬೇಕಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ಏಕಾ–ಏಕಿ ಸೂಚನೆಗಳನ್ನು ಕಳುಹಿಸುತ್ತಾ ಇದೆ. ನೀವು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಉಳಿತಾಯ ಯೋಜನೆಗಳನ್ನು ಜನಗಳಿಗೆ ಹೇಳುತ್ತಾ ಇದ್ದೀರಿ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಜನರಿಗೆ ಹೇಳುತ್ತಿಲ್ಲ, ಅವರ ಮನವೊಲಿಸಿ ಉಳಿತಾಯ ಮಾಡಲು ಹೇಳಿಯೆಂದು ನಮಗೆ ಹೇಳುತ್ತಾರೆ.

(೧೧) ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಹಕಾರೀ ಸಂಘಗಳ ಸಾಲಗಳ ವಸೂಲಿ ಮಂತ್ರ ಕಿರುಕುಳ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಡೀ ರಾಜ್ಯದಲ್ಲಿ ಭೀಕರ ಬರಗಾಲಕ್ಕೆ ತುತ್ತಾಗಿರುವ ಗ್ರಾಮಗಳಲ್ಲಿ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಬರಗಾಲ ಪ್ರದೇಶವೆಂದು ಜಿಲ್ಲಾಧಿಕಾರಿಗಳು ಘೋಷಿಸಿದ್ದು ಸರ್ಕಾರದ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಈವರೆಗೆ ಸರ್ಕಾರ ಬರಗಾಲಕ್ಕೆ ತುತ್ತಾದ ಗ್ರಾಮಗಳೆಂದು ಘೋಷಿಸದೆ ಇರುವುದರಿಂದ.

ಸಹಕಾರಿ ಸಂಘಗಳಿಂದ ಕೊಟ್ಟಿರುವ ಸಾಲದ ವಸೂಲಿ ಕಿರುಕುಳ ಮತ್ತು ಕಂದಾಯ ವಸೂಲಿ ಮಾಡದೆ ಇರುವುದು ಇತರೆ ಸೌಲಭ್ಯಗಳು ರೈತರಿಗೆ ಸಿಗದೆ ತೊಂದರೆಗೊಳಗಾಗಿದ್ದಾಗ್ಯೂ ಅದರಲ್ಲೂ ವಿಶೇಷವಾಗಿ ಕ್ರಾಪ್ ಇನ್ಸುರೆನ್ಸ್ ಮಾಡಿರುವ ರೈತರಿಗೆ ತುಂಬ ತೊಂದರೆ ಆಗಿದೆ.

ಉದಾಹರಣೆಗೆ ಶಿಕಾರಿಪುರ ತಾಲ್ಲೂಕಿನ ೧೩೩ ಬರಗಾಲ ಪೀಡಿತ ಗ್ರಾಮಗಳಲ್ಲಿ ಜಿಲ್ಲಾಧಿಕಾರಿಗಳು ಕೇವಲ ಅವರ ವ್ಯಾಪ್ತಿಗೆ ಬರುವ ೧೧ ಗ್ರಾಮಗಳನ್ನು ಬರಗಾಲ ಪ್ರದೇಶಗಳೆಂದು ಘೋಷಿಸಿದ್ದಾರೆ. ಉಳಿದ ೧೨೨ ಗ್ರಾಮಗಳನ್ನು ಸರ್ಕಾರ ಘೋಷಣೆ ಮಾಡಬೇಕಾಗಿದೆ

ಆದ್ದರಿಂದ ತಕ್ಷಣ ರೈತರಿಗೆ ಸಿಗಬೇಕಾದ ಎಲ್ಲ ಸೌಲಭ್ಯಗಳು ಸಿಗುವ ದೃಷ್ಟಿಯಿಂದ ಅಧಿಕಾರಿಗಳ ಕಿರುಕುಳ ತಪ್ಪುವ ದೃಷ್ಟಿಯಿಂದ ರಾಜ್ಯದ ಎಲ್ಲ ಬರಗಾಲ ಪೀಡಿತ ಗ್ರಾಮಗಳನ್ನು ಸರ್ಕಾರ ತಕ್ಷಣ ಘೋಷಣೆ ಮಾಡಬೇಕೆಂದು, ಈ ಬಗ್ಗೆ ಸರ್ಕಾರ ಈವರೆಗೆ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಗೃಹಸಚಿವರು ಇಲ್ಲ ಸ್ವಾಮಿ, ಅವರ ಕೈಯಲ್ಲಿ ಈ ವಿಚಾರವಾಗಿ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಬಯಸುತ್ತೇನೆ.